**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಮತಾ ಯಾದವ |
| ತಂದೆಯ ಹೆಸರು | : | ಕೆ. ಬಿ. ರಾಮಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಸಹಾಯಕ ನಿರ್ದೇಶಕರು, RFSL ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 10

ಸಿ.ಡಬ್ಲ್ಯೂ 8

ದಿ: 18-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿಃ 04-03-2022 ರಿಂದ ದಿಃ 31-08-2025 ರವರೆಗೆ ನಾನು ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದೆ. ದಿಃ 01-10-2022 ರಂದು ದಾವಣಗೆರೆ ಬಡಾವಣೆ ಪೊಲೀಸರು ಈ ಪ್ರಕರಣದಲ್ಲಿ ಸೀಲ್ ಆಗಿರುವಂತಹ 03 ವಸ್ತುಗಳನ್ನು ನಮ್ಮ ಪ್ರಯೋಗಾಲಯಕ್ಕೆ ಸಿಪಿ.ಸಿ. 410 ರವರ ಮೂಲಕ ವೈಜ್ಞಾನಿಕ ವಿಶ್ಲೇಷಣಕ್ಕಾಗಿ ಸ್ವೀಕರಿಸಿದ್ದರು. ಸದರಿ ಪ್ರಕರಣವು ನನಗೆ ಹಂಚಿಕೆಯಾಗಿದ್ದು, ಸದರಿ ವಸ್ತುಗಳನ್ನು ನಾನು ಪರಿಶೀಲಿಸಿ ನೋಡಿದಾಗ ಸದರಿ ವಸ್ತುಗಳ ಮೇಲೆ ಇದ್ದ ಸೀಲ್ ಸುಸ್ಥಿತಿಯಲ್ಲಿದ್ದು, ತನಿಖಾಧಿಕಾರಿಗಳು ಕಳುಹಿಸಿರುವ ಮಾದರಿ ಸೀಲ್ ಗೆ ಹೊಂದಾಣಿಕೆಯಾಗಿರುತ್ತದೆ. ಸದರಿ ವಸ್ತುಗಳನ್ನು ನಾನು ಪರಿಶೀಲನೆ ಮಾಡಿದಾಗ ಈ ಕೆಳಗಿನಂತೆ ಕಂಡು

ಬಂದಿರುತ್ತದೆ. 1. ಒಂದು ಚಾಕು, 2. ಒಂದು ಟಿ-ಶರ್ಟ, 3. ಒಂದು ಬನಿಯನ್. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 3 ಅಂತ ಗುರುತಿಸಲಾಗಿದೆ.

2. ನಂತರ ನಾನು ಅವುಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ. ಇದರ ಬಾಬ್ತು ನನ್ನ ವರದಿಯಲ್ಲಿ ನಮೂದು ಮಾಡಿರುತ್ತೇನೆ. 03 ವಸ್ತುಗಳ ಮೇಲೆ ರಕ್ತದ ಅಂಶಗಳು ಕಂಡು ಬಂದಿರುತ್ತದೆ. ರಕ್ತದ ಅಂಶವು ಮಾನವ ರಕ್ತ ಇದ್ದು, 'O' Group ಗೆ ಸೇರಿದ್ದು ಇರುತ್ತದೆ. ನಾನು ಪರಿಶೀಲನೆ ಮಾಡಿದ ವಸ್ತುಗಳು ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳು ಇರುತ್ತವೆ. ಅವುಗಳ ಮೇಲೆ ನನ್ನ ಸಹಿ, ಸೀಲ್ ಇರುತ್ತದೆ. ಈ ಬಗ್ಗೆ ನಾನು ನೀಡಿರುವಂತಹ ವರದಿಯನ್ನು ಈಗ ನೋಡುತ್ತಿದ್ದು,ಅದನ್ನು ನಿಪಿ-13 ಅಂತ ಗುರುತಿಸಲಾಯಿತು. ನಿಪಿ-13 ರಲ್ಲಿ ನನ್ನ ಡಿಜಿಟಲ್ ಸಹಿ ಇರುತ್ತದೆ. ನಮ್ಮ ಕಛೇರಿಯವರು ನೀಡಿದ ಸ್ವೀಕೃತಿಯನ್ನು ನೋಡುತ್ತಿದ್ದು, ಅದನ್ನು ನಿಪಿ-14 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ:**

3. ತಡವಾಗಿ ಮುದ್ದೆ ಮಾಲನ್ನು ಕಳುಹಿಸಿದ್ದಲ್ಲಿ ಅದಕ್ಕೆ ಅಂಟಿರುವ ರಕ್ತದ ಕಲೆಗಳು ಉದಿರಿ ಹೋಗುವ ಸಾಧ್ಯತೆ ಇರುತ್ತದೆ ಅಂದರೆ ಸರಿಯಲ್ಲ. ಯಾವ ವಿಧಿ ವಿಧಾನದ ಮೂಲಕ ಮು.ಮಾ.1 ರಿಂದ 3 ನ್ನು ನಾನು ಪರೀಕ್ಷೆ ಮಾಡಿರುವುದು ಸರಿಯಾದ ರೀತಿಯಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. Benzidine test ಅಂದರೆ ಕಲರ್ ಟೆಸ್ಟ್ Takayama test ಅಂದರೆ crystal formation test ಇರುತ್ತದೆ. ಆ ಟೆಸ್ಟಗಳ ವಿವರಣೆಯನ್ನು ವರದಿಯಲ್ಲಿ ಕಾಣಿಸಿರುವುದಿಲ್ಲ ಆದರೆ ನಮ್ಮ ಇಲಾಖೆಯ Observation sheet ನಲ್ಲಿ ನಮೂದಾಗಿರುತ್ತದೆ. ನಾನು format ನಲ್ಲಿ ವರದಿಯನ್ನು ಕೊಟ್ಟಿದ್ದೇನೆ. Observation sheet ನ್ನು ವರದಿಯೊಂದಿಗೆ ಕೊಡಬೇಕು ಅಂತ ನಮಗೆ ಹೇಳಿಲ್ಲ. ಮು.ಮಾ.1 ರಿಂದ 3 ರ ಮೇಲೆ ಅಂಟಿರುವ ರಕ್ತದ ಅಂಶ ಮಾನವನಿಗೆ ಸೇರಿದ್ದು ಅಂತ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನಾನು ನೀಡಿರುವಂತಹ ವರದಿ

ಕೇವಲ ಯಾಂತ್ರಿಕ ವರದಿ ಇದ್ದು ವಾಸ್ತವಿಕ ವರದಿ ಇರುವುದಿಲ್ಲ ಅಂದರೆ ಸುಳ್ಳು. ನಾನು ಮು.ಮಾ.1 ರಿಂದ 3 ನ್ನು ಯಾವುದೇ ವಿಶ್ಲೇಷಣೆಗೆ ಒಳಪಡಿಸಿರುವುದಿಲ್ಲ ಅಂದರೆ ಸುಳ್ಳು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.